# ತಪ್ಪು ಮಾಡದವ್ರು ಯಾರವ್ರೆ

ಒಂದು ಸಂಜೆ ಕಡಲ ತಡಿಯಲ್ಲಿ ಕುಳಿತು ಏಸು ವಿಚಾರ ಮಗ್ನನಾಗಿದ್ದ. ಅವನ ಮನಸ್ಸು ಶಾಂತವಾದ ಕಡಲಿನಲ್ಲಿ ತೇಲುತ್ತಿತ್ತು. ಇದ್ದಕ್ಕಿದ್ದಂತೆ ಆ ಶಾಂತತೆಗೆ ಅಡಚಣೆಯಾಗಿ ಅವನ ಮುಂದೆ ಧಾರ್ಮಿಕ ವ್ಯಕ್ತಿಗಳು ಹಾಗೂ ಅವರ ಜೊತೆಯಲ್ಲಿ ಒಬ್ಬ ಹೆಣ್ಣು ಮಗಳು ನಿಂತಿದ್ದರು. 'ದೇವಪುತ್ರನೆಂದು ಜಂಭ ಕೊಚ್ಚಿಕೊಳ್ಳುವೆಯಲ್ಲವೇ? ಈಕೆ ವೇಶ್ಯೆ, ನಡತೆಗೆಟ್ಟವಳು, ಸಾಕ್ಷಿ ಸಮೇತವಾಗಿ ಹಿಡಿದಿದ್ದೇವೆ. ಈಗ ನ್ಯಾಯ ಹೇಳು' ಎಂದು ಪಟ್ಟು ಹಿಡಿದು ಬಲವಂತಪಡಿಸಿದರು. ಇದ್ದಕ್ಕಿದ್ದಂತೆ ಆದ ತನ್ನ ಏಕಾಂತದ ಭಂಗಕ್ಕೆ ಬೇಸರಿಸದೆ ಏಸು ಕ್ರೌರ್ಯದಿಂದ ಕುದಿಯುವ ಆ ವ್ಯಕ್ತಿಗಳನ್ನು ಹಾಗೂ ಗಾಯಗೊಂಡ ಅಪರಾಧಿ ಭಾವದಿಂದ ತಲೆತಗ್ಗಿಸಿ ನಿಂತ ಆ ಹೆಣ್ಣು ಮಗಳನ್ನು ತಣ್ಣಗೆ ನಿಟ್ಟಿಸಿದ. 'ಒಳ್ಳೆಯ ಕೆಲಸವನ್ನೇ ಮಾಡಿರುವಿರಿ. ಮೆಚ್ಚಿಕೊಂಡೆ. ಈಗ ಈಕೆಗೆ ಯಾವ ಶಿಕ್ಷೆ ಕೊಡಬೇಕು' ಎಂದು ಕೇಳಿದ. ಆ ವ್ಯಕ್ತಿಗಳು ಖುಷಿಯಿಂದ 'ಕಲ್ಲಲ್ಲಿ ಹೊಡೆದು ಸಾಯಿಸಬೇಕೆಂದು ಧರ್ಮಶಾಸ್ತ್ರದಲ್ಲಿ ಹೇಳಿದೆ' ಎಂದರು. ತುಂಬಾ ಹೊತ್ತು ಚಿಂತಿಸಿ ಏಸು 'ಸರಿ, ನಿಮ್ಮಲ್ಲಿ ಯಾವ ತಪ್ಪೂ ಮಾಡದವನು ಈಕೆಗೆ ಕಲ್ಲಿನಿಂದ ಹೊಡೆಯಲಿ' ಎಂದು ಮರಳ ಮೇಲೆ ಬೆರಳಿನಿಂದ ಏನನ್ನೋ ಬರೆಯಲಾರಂಭಿಸಿದ. ಒಬ್ಬೊಬ್ಬರೇ ತಮ್ಮ ಹೊರಗು, ಒಳಗುಗಳನ್ನು ಕಂಡುಕೊಳ್ಳುತ್ತಾ ಅಲ್ಲಿಂದ ಕಾಲ್ತೆಗೆಯಲಾರಂಭಿಸಿದ್ದರು. ಆ ಹೆಣ್ಣು ಪಶ್ಚಾತ್ತಾಪದ ಅಗ್ನಿಕುಂಡದಲ್ಲಿ ಮಿಂದು ಎದ್ದು ನಿಂತಿದ್ದಳು.

ಇದು ಬೈಬಲ್ಲಿನಲ್ಲಿ ಬರುವ ಕತೆ. ಸಮಾಜದ ಸ್ವಾಸ್ಥ್ಯ ಕಾಪಾಡಲು ಕೆಲವು ಕಾನೂನು, ಕಟ್ಟಳೆಗಳನ್ನು ರೂಪಿಸಲಾಗಿದೆ. ನಾಗರಿಕ ಸಮಾಜದ ಈ ವ್ಯವಸ್ಥೆಗಳು ಜಾರಿಗೆ ಬರುವ ಮುನ್ನ ನಮ್ಮ ಗ್ರಾಮ ಸಮಾಜಗಳು ಜಗಳಗಳನ್ನು, ವ್ಯಾಜ್ಯಗಳನ್ನು ತಮ್ಮದೇ ಆದ ನ್ಯಾಯ, ಪಂಚಾಯಿತಿಗಳ ಮೂಲಕ ತೀರ್ಮಾನಿಸುತ್ತಿದ್ದರು. ಮೊದಲೆಲ್ಲಾ ಅರಸನ ಸಮ್ಮುಖದಲ್ಲಿ ವಿಚಾರಣೆ ನಡೆಯುತ್ತಿತ್ತು. ಪ್ರಭುತ್ವಗಳೆಲ್ಲಾ ಕಣ್ಮುಚ್ಚಿದಾಗ ದೇವಸ್ಥಾನಗಳಲ್ಲಿ, ದೇವಸ್ಥಾನದಿಂದ ಅರಳೀ ಮರದ ಕಟ್ಟೆಗೆ ವಿಚಾರಣೆಗಳು ವರ್ಗಾಯಿಸಲ್ಪಟ್ಟವು. ಶಾನುಭೋಗ, ಪಟೇಲ, ಗೌಡ, ಮತ್ತಿತರ ಊರ ಮುಖಂಡರ ಎದುರು ನಡೆಯುವ ವಿಚಾರಣೆಗಳು ಮಾನವೀಯತೆಯಿಂದಲೇ ಕೂಡಿರುತ್ತಿದ್ದವು. ವರ್ಗ, ಪ್ರತಿಷ್ಠೆ, ಜಾತೀಯತೆಯಂತಹ ಪಿಡುಗುಗಳು ಕಾಲಿಟ್ಟ ಮೇಲೆ ಪಂಚಾಯಿತಿ ಕಟ್ಟೆಯ ಮೇಲಿನ ನಂಬಿಕೆಗಳು ಕಳೆದು ಹೋಗಿ ಪೊಲೀಸ್ ಸ್ಟೇಷನ್, ಕೋರ್ಟ್‌ಗಳು ನ್ಯಾಯ ನಿರ್ಣಯದ ಕೇಂದ್ರಗಳಾದವು. ಇಷ್ಟೆಲ್ಲಾ ವ್ಯವಸ್ಥೆಗಳಿದ್ದರೂ 'ನ್ಯಾಯವೆನ್ನುವುದು ಕೈಗೆ ದಕ್ಕದ ಫಲ'ವಾಗಿಯೇ ಸದ್ಯದ ಸಂದರ್ಭದಲ್ಲಿ ಕಾಣುತ್ತಿದೆ.

ಸಮಾಜದಲ್ಲಿ ಅಪರಾಧವೆನ್ನುವುದು ಹಲವು ರೂಪಗಳಲ್ಲಿ ಪ್ರಕಟವಾಗುತ್ತಲೇ ಇರುತ್ತದೆ. ಕಳ್ಳತನ, ಕೊಲೆ, ವೇಶ್ಯಾ ಸಮಸ್ಯೆ, ಮಕ್ಕಳ ಅಪಹರಣ ಮತ್ತು ಮಾರಾಟ, ಅಂಗಾಂಗಗಳನ್ನು ಮಾರಾಟ ಮಾಡುವ ಜಾಲ – ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇತ್ತೀಚೆಗೆ ಹರಡುತ್ತಿರುವ ಹೊಸ ಸುದ್ದಿಯೆಂದರೆ ಮಕ್ಕಳ ಕಳ್ಳರು ಎಲ್ಲೆಡೆ ಇದ್ದಾರೆ ಎಂಬುದು. ಇಂತಹ ಸುದ್ದಿಗಳು ವೈರಾಣುಗಳ ಹಾಗೆ ವೇಗವಾಗಿ ಹಬ್ಬಿ ಬಿಡುತ್ತವೆ. ತಮಾಷೆಯೆಂದರೆ ದಿನನಿತ್ಯ ಕಾಣುವ ವ್ಯಕ್ತಿಗಳಿಗಿಂತ ಭಿನ್ನವಾಗಿ ವೇಷ, ಉಡುಗೆ, ತೊಡುಗೆಗಳಿಂದ ಕೂಡಿದ ವ್ಯಕ್ತಿಗಳೇನಾದರೂ ಅನುಮಾನಾಸ್ಪದವಾಗಿ ನಮ್ಮ ನಡುವೆ ಓಡಾಡಿದರೆ ಅವರೇ ಕಳ್ಳರೆಂದು ಸುಲಭವಾಗಿ ತೀರ್ಮಾನಿಸಲ್ಪಡುತ್ತಾರೆ.

ಇತ್ತೀಚೆಗೆ ಬೆಂಗಳೂರಿನ ಬಡಾವಣೆಯೊಂದರಲ್ಲಿ ನಡೆದ ಘಟನೆ ಯೊಂದರಲ್ಲಿ ಅಮಾಯಕನಾದ ವ್ಯಕ್ತಿಯೊಬ್ಬ ಈ ರೀತಿ ಸಂದೇಹಿಸಲ್ಪಟ್ಟು, ಆಕ್ರಮಣಕ್ಕೆ ಒಳಗಾಗಿ ಸತ್ತ ಘಟನೆಯನ್ನು ಜ್ಞಾಪಿಸಿಕೊಳ್ಳಬಹುದು. ಇದೊಂದು ಹೇಯವಾದ, ಅಮಾನವೀಯವಾದ ಘಟನೆ. ಎಂತೆಂತಹ ಕೊಲೆ, ದರೋಡೆ ಮಾಡಿದ ಅಪರಾಧಿಗಳೇ ನ್ಯಾಯ ತೀರ್ಮಾನಕ್ಕೆ ಒಳಗಾಗದೆ ಜೈಲಿನ ಕೊಠಡಿಗಳಲ್ಲಿ ಭದ್ರತೆಯಿಂದ ಜೀವಿಸುತ್ತಿರಬೇಕಾದರೆ ಇಂತಹ ವ್ಯಕ್ತಿಗಳ ಜೀವಕ್ಕೆ ಬೆಲೆ ಕಟ್ಟುವವರು ಯಾರು? ಸಂದೇಹವೊಂದೇ ಸಾಕೆ ಕಾನೂನನ್ನು ಕೈಗೆತ್ತಿಕೊಳ್ಳಲು? ಮಾಧ್ಯಮದಲ್ಲಿ ಬರುವ ಸುದ್ದಿಗಳು, ತೋರುವ ಸುದ್ದಿಗಳು 'ಮನುಷ್ಯನ ಜೀವ ಇಷ್ಟು ಹಗುರವೆ' ಎಂಬ ನೋವನ್ನು ಉಂಟು ಮಾಡುತ್ತದೆ. ಇಂತಹ ಸಂದರ್ಭಗಳಲ್ಲೆಲ್ಲಾ ಅಡಗಿಸಿಟ್ಟ ಎಲ್ಲಾ ಪಶುತನಗಳು ಹೊರ ಹೊಮ್ಮುತ್ತವೆ, ಅಟ್ಟಹಾಸ ಮಾಡುತ್ತವೆ. ಕೇಕೆ ಹಾಕಿಸುತ್ತವೆ, ತಮ್ಮನ್ನು ಹೀರೋ ಎಂದುಕೊಳ್ಳುವ ಭ್ರಮೆಗೆ ಸಿಲುಕಿಸುತ್ತವೆ. ವಿವೇಚನೆಯೆನ್ನುವುದು ಸದಾಕಾಲ ಜಾಗ್ರತವಾಗಿರಬೇಕು. ಇತರರು ತನ್ನಂತೆ ನೋಯುತ್ತಾರೆ ಎಂಬ ಪರಿವೆ ಇರಬೇಕು. ಎಲ್ಲಕ್ಕೂ ಮುಖ್ಯ 'ಕಾನೂನು ತನಗಿಂತ ದೊಡ್ಡದು' ಎಂಬ ತಿಳಿವಳಿಕೆ ಇರಲೇಬೇಕು. ಇಂತಹ ಘಟನೆಗಳಲ್ಲಿ ಕಾನೂನಿಗೆ ಶಂಕಿತರನ್ನು ಒಪ್ಪಿಸಬೇಕೇ ವಿನಃ ವಿಕೃತರಾದ ದಂಡಪಾಲಕರಾಗಬಾರದು. ಇದನ್ನೇ ಏಸು ಹೇಳಿದ್ದು. 'ಯಾವ ತಪ್ಪೂ ಮಾಡದವನು ಕಲ್ಲಿಂದ ಹೊಡೆಯಲಿ' ಎಂದು. ನಮ್ಮ ನಡುವೆ ಯಾವ ತಪ್ಪು ಮಾಡದ ಶುದ್ಧ ಚಾರಿತ್ರ್ಯದ ವ್ಯಕ್ತಿಗಳು ಇದ್ದಾರೆಯೇ.?

■ **ಅಮೃತಮತಿ**

## ಮಾತೇ ಮುತ್ತು

★ ಪೂರ್ಣ ಬದ್ಧತೆಯಿಂದ ಕೆಲಸ ಮಾಡಿ, ಯಶಸ್ಸು ಸಿಗುತ್ತದೆ, ಸ್ಪರ್ಧೆ ದೊಡ್ಡ ಸಂಗತಿ ಆಗುವುದಿಲ್ಲ.

ಎಲ್ಬರ್ಟ್ ಹ್ಯೂಬರ್ಡ್

★ ಯಾರಿಗೆ ಸ್ವಂತ ಶಕ್ತಿಯ ಬಗ್ಗೆ ವಿಶ್ವಾಸ ಇದೆಯೋ, ಆತ ಇತರರ ವಿಶ್ವಾಸವನ್ನು ಗೆಲ್ಲುತ್ತಾನೆ.

ಲೀಬ್ ಲ್ಯಾಜರೋ

★ ಕಂಡೆ ಕಾಣೆನೆಂಬುದು ಕಂಗಳ ಭ್ರಮೆ, ಕೂಡಿದೆನಗಲಿದೆನೆಂಬುದು ಕಾಯ ಭ್ರಮೆ.

ವಚನಕಾರ ಆದಯ್ಯ

★ ಈ ಇರುಳು ನಿನ್ನ ಗೂಡ ಸುತ್ತ ಸುತ್ತುತ್ತಿರುವೆ,
ತಿರುತಿರುಗಿ ಬೆಳಕು ಹರಿವವರೆಗೆ.
ಗಾಳಿ ತಣ್ಣಗೆ ಆಗ ಅರಹುತ್ತದೆ,
ಅವನು ಮಧುಬಟ್ಟಲ ಎತ್ತುತ್ತಾನೆ,
ಅದು ಯಾರದೋ ತಲೆಯ ಬುರುಡೆ

–ರೂಮಿ

★ ಅಜ್ಞಾನ ಮತ್ತು ಆತ್ಮವಿಶ್ವಾಸ ಇದ್ದವನನ್ನು ಯಶಸ್ಸು ಖಂಡಿತಾ ಹಿಂಬಾಲಿಸುತ್ತದೆ.

ಮಾರ್ಕ್ ಟ್ವೈನ್

★ ಅತಿಯಾದ ಆತ್ಮವಿಶ್ವಾಸ ಅಪಾಯದ ಮೊಟ್ಟೆಗಳನ್ನಿಡುತ್ತದೆ.

ಪಿಯರ್ ಕಾರ್ನಿಲ್

★ ವೇದಶಾಸ್ತ್ರ ಪುರಾಣ ಆಗಮ ಪುರಾತನರ ಗೀತದ ವಚನ ಪ್ರಸಂಗವನರಿದು ದಾಸೋಹವಿಲ್ಲದಿದ್ದಡೆ, ಆ ಓದು ಗಿಳಿ ಓದಿದಂತೆ.

ಉರಿಲಿಂಗಪೆದ್ದಿ

★ ಪುರುಷರಿಗೆ ವಿದಾಯ ಹೇಗೆ ಹೇಳುವುದೆಂದು ಗೊತ್ತಿಲ್ಲ; ಸ್ತ್ರೀಯರಿಗೆ ವಿದಾಯ ಯಾವಾಗ ಹೇಳಬೇಕೆಂದು ಗೊತ್ತಿಲ್ಲ.

ಹೆಲೆನ್ ರೋಲ್ಯಾಂಡ್

★ ಅಂಬಲಿ ಕುಡಿಯುವವನಿಗೆ ಮೀಸೆ ತಿಕ್ಕುವವನೊಬ್ಬ.

ಕನ್ನಡ ಗಾದೆ

★ ಒಬ್ಬ ಮಹಿಳೆಯಾಗಿ ನನಗೆ ದೇಶವಿಲ್ಲ; ಒಬ್ಬ ಮಹಿಳೆಯಾಗಿ ನನಗೆ ನನ್ನ ದೇಶವೇ ಜಗತ್ತು.

ವರ್ಜೀನಿಯಾ ವೂಲ್ಫ್

★ ಪ್ರತಿಯೊಬ್ಬ ಮೂರ್ಖನ ಹಿಂದೆಯೂ ಒಬ್ಬ ಶ್ರೇಷ್ಠ ಮಹಿಳೆ ಇರುತ್ತಾಳೆ.

ಜಾನ್ ಲೆನನ್

★ ಹೆಣ್ಣಿನ ಸೌಂದರ್ಯವನ್ನು ನೋಡಿ ಪ್ರಿಯಕರ ನಗುತ್ತಾನೆ; ಗಂಡ ಭಯ ಪಡುತ್ತಾನೆ.

ಅಂಬ್ರೋಸ್ ಬಿಯರ್ಸ್

★ ಶಿಕ್ಷಣವೆಂದರೆ, ಮನಸ್ಸು, ದೇಹ, ಬುದ್ಧಿಗಳೊಂದಿಗೆ ದೊರೆಯುವ ಸಂಸ್ಕಾರ

ಹರ್ಡೀಕರ್ ಮಂಜಪ್ಪ